**ಕರ್ನಾಟಕ ಸರ್ಕಾರ**

**ಆರ್ಥಿಕ ಇಲಾಖೆ**

ಸಂಖ್ಯೆ ಆಇ.(ವಿಶೇಷ) 1 ಪಿಇಎನ್ 04.

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 02–09–2004.

**ಸುತ್ತೋಲೆ**

**ವಿಷಯ:** ತಡವಾಗಿ ಪಾವತಿಯಾದ ಪಿಂಚಣಿ,ಉಪದಾನ ಹಾಗು ರಜೆ ನಗದೀಕರಣ ಇವುಗಳ ಮೇಲೆ ಬಡ್ಡಿಯನ್ನು ನೀಡುವ ಪ್ರಕರಣಗಳಲ್ಲಿ ನ್ಯಾಯಾಲಯ ವಿವಾದಗಳನ್ನು ತಪ್ಪಿಸಲು ವಹಿಸಬೇಕಾದ ಮುಂಜಾಗ್ರತೆಗಳ – ಕುರಿತು.

**ಉಲ್ಲೇಖ:** 1) ಸರ್ಕಾರಿ ಆದೇಶ ಸಂ.ಎಫ್‌ಡಿ(ಸ್ಪೆಷಲ್)199/ಪಿಇಎನ್/93,ದಿ: 13–09–1994.

2) ಸರ್ಕಾರಿ ಆದೇಶ ಸಂ.ಎಫ್‌ಡಿ(ಸ್ಪೆಷಲ್)92/ಪಿಇಎನ್/95,ದಿ: 17–06–1995.

3) ಸರ್ಕಾರಿ ಆದೇಶ ಸಂ.ಆಇ(ವಿ)1/ಪಿಇಎನ್/03,ದಿ: 21–08–2003.

*******

1. ಮೇಲೆ ಓದಲಾದ (1) ರ ಸರ್ಕಾರಿ ಆದೇಶದ ಕಂಡಿಕೆ 11 ರನ್ವಯ ವಿಳಂಬವಾಗಿ ಪಾವತಿಸಿದ ನಿವೃತ್ತಿ ವೇತನ ಸೌಲಭ್ಯಗಳ ಮೇಲೆ ನೀಡಬೇಕಾದ ಬಡ್ಡಿಯ ಕುರಿತಾದ ಮಂಜೂರಾತಿ ಆದೇಶಗಳನ್ನು ಸಂಬಂಧಪಟ್ಟ ಆಡಳಿತ ಇಲಾಖೆಗಳು ವಿಶೇಷಾಧಿಕಾರಿ (ವಿಶ್ರಾಂತಿ ವೇತನ) ಆರ್ಥಿಕ ಇಲಾಖೆ ಇವರ ಸಹಮತಿಯನ್ನು ಪಡೆದು ಹೊರಡಿಸಬೇಕಾಗಿರುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ಕೆಲವು ಆಡಳಿತ ಇಲಾಖೆಗಳು ಮೇಲಿನ ನಿಯಮವನ್ನು ಪಾಲಿಸದೇ ದೋಷಪೂರಿತ ಬಡ್ಡಿ ಲೆಕ್ಕಚಾರಗಳೊಂದಿಗೆ ಮಂಜೂರಾತಿಗಳನ್ನು ನೀಡುತ್ತಿರುವುದು ಆರ್ಥಿಕ ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಸಾಮಾನ್ಯವಾಗಿ ಈ ರೀತಿಯ ಆದೇಶಗಳನ್ನು ಇಲಾಖಾ ಹಾಗೂ ನ್ಯಾಯಾಲಯ ವಿಚಾರಣೆಗಳ ಹಂತಗಳಲ್ಲಿ ಇಲಾಖಾ ಅಧಿಕಾರಿಗಳು ಅತಿಯಾದ ಕಾಲ ವಿಳಂಬ ಮಾಡಿ ಕೊನೆ ಹಂತದಲ್ಲಿ ನ್ಯಾಯಾಲಯ ನಿಂದನೆಯನ್ನು ತಪ್ಪಿಸಿಕೊಳ್ಳುವ ಸಂದಿಗ್ದ ಪರಿಸ್ಥಿತಿಯಲ್ಲಿ ಹೊರಡಿಸಿರುತ್ತಿರುವುದು ಕಂಡುಬಂದಿದೆ.

2. ಇಲಾಖಾ ಕಾರ್ಯದರ್ಶಿಗಳಿಂದ ಸ್ವೀಕೃತಗೊಳ್ಳುವ ಬಡ್ಡಿ ಪಾವತಿ ಪ್ರಸ್ತಾವನೆಗಳಲ್ಲಿ ವಿಶ್ರಾಂತಿ ವೇತನ ಶಾಖೆಯ ವಿಶೇಷವಾಗಿ ಈ ಕೆಳಗಿನ ಅಂಶಗಳನ್ನು ಪರಿಶೀಲಿಸಿ ತನ್ನ ಅಭಿಪ್ರಾಯ/ಸಹಮತಿಯನ್ನು ನೀಡಬೇಕಾಗುತ್ತದೆ.

| ವಿಷಯ | ಗಮನಿಸಬೇಕಾದ ಪ್ರಮುಖ ಅಂಶಗಳು |
|---|---|
| 1) ಬಡ್ಡಿಯನ್ನು ಕಾಲ ಕಾಲಕ್ಕೆ ಬದಲಾದ ದರದಲ್ಲಿ ಲೆಕ್ಕ ಹಾಕುವುದು. | ಬಡ್ಡಿಯ ದರವನ್ನು ಉಲ್ಲೇಖಿತ ಸರ್ಕಾರಿ ಆದೇಶಗಳನ್ವಯ 1985 ರಲ್ಲಿ ವಾರ್ಷಿಕ ದರ 7% ನಂತೆ ಪ್ರಾರಂಭವಾಗಿ ನಂತರ ಕಾಲ ಕಾಲಕ್ಕೆ ಪರಿಷ್ಕರಿಸಲ್ಪಟ್ಟಂತೆ ದಿನಾಂಕ: 13–09–1994 ರಿಂದ ವಾರ್ಷಿಕ ದರ 12% ರಂತೆ ಇದ್ದು ದಿನಾಂಕ: 21–08–2003 ರಿಂದ ಸದರಿ ದರವು 8% ರಂತೆ ಇರುತ್ತದೆ. |
| 2) ಬಡ್ಡಿ ಪಾವತಿಯುತುಟ್ಟಿ ಭತ್ಯೆಗೆ ಅನ್ವಯಿಸುವುದಿಲ್ಲ. | ತುಟ್ಟಿಭತ್ಯೆಯನ್ನು ಸರ್ಕಾರದ ಕಾರ್ಯಕಾರಿ ಆದೇಶಗಳನ್ವಯ ಮಂಜೂರು ಮಾಡಲಗುತ್ತಿದ್ದು, ಪಿಂಚಣಿಯು ಶಾಸನಬದ್ಧ ನಿಯಮಗಳನ್ವಯ ಪಾವತಿಸಲ್ಪಡುತ್ತದೆ. ಆದ್ದರಿಂದಲೇ 1871 ರ ಪೆನ್‌ಷನ್ ಆಕ್ಟ್‌ನ ಸೆಕ್ಷನ್ 11 ಅನ್ವಯ ಪಿಂಚಣಿಯು ನ್ಯಾಯಾಲಯದ ಪ್ರಕರಣಗಳಲ್ಲಿ ಜಪ್ತಿಗೆ ಒಳಪಡುವುದಿಲ್ಲ. ಕೆ.ಸಿ.ಎಸ್. ನಿಯಮ 296 ರ ಅನ್ವಯ ತುಟ್ಟಿ ಭತ್ಯೆಯನ್ನು |

| ವಿಷಯ | ಗಮನಿಸಬೇಕಾದ ಪ್ರಮುಖ ಅಂಶಗಳು |
|---|---|
| | ವಿಶೇಷವಾಗಿ ಪರಿಗಣಿಸಿ ಆದೇಶಿಸುವ ಹೊರತು ಅದನ್ನು ಪಿಂಚಣಿ ಎಂದು ಪರಿಗಣಿಸಲು ಅವಕಾಶವಿಲ್ಲ. ವಿರೋದಾಭಾಸದಲ್ಲಿ ಅರ್ಥೈಸಲ್ಪಡುವ ಹೊರತು ಪಿಂಚಣಿಯಲ್ಲಿ "ಉಪದಾನ" ಸಹ ಸೇರಿರುತ್ತದೆ. |
| 3) ಮಾಸಿಕ ಪಿಂಚಣಿ ಮೊತ್ತಗಳಿಗೆ ಬಡ್ಡಿಯನ್ನು ಇಳಿಮುಖ ದರದಲ್ಲಿ ಲೆಕ್ಕ ಹಾಕಬೇಕು . | ಪಿಂಚಣಿಗೆ ಬಡ್ಡಿಯನ್ನು ಕರ್ನಾಟಕ ಆರ್ಥ ಸಂಹಿತೆ ಅನುಚ್ಛೇಧ 208 ಸಿ (ಎ) ನಿಯಮದನ್ವಯ ಪ್ರತೀ ತಿಂಗಳ ಕೊನೆಯ ದಿನದಂದು ಪಾವತಿಗೆ ಬಾಕಿ ಯಾಗುವ ಮೊತ್ತದ ಮೇಲೆ ಪ್ರತೀ ತಿಂಗಳಿಗೆ ಇಳಿಮುಖ ದರದಲ್ಲಿ ಲೆಕ್ಕ ಹಾಕಬೇಕು. ಕಾರಣ ಪಿಂಚಣಿ ಪ್ರತೀ ತಿಂಗಳಿಗೂ ಅನ್ವಯಿಸುವ ಪಾವತಿಯ ಮೊತ್ತವಾಗಿದ್ದು, ಇದು ಉಪದಾನದಂತೆ ಏಕ ಗಂಟಿನಲ್ಲಿ ಪಾವತಿಯಾಗುವ ಮೊತ್ತವಲ್ಲ. |
| 4) ಪರಿವರ್ತಿತ ಪಿಂಚಣಿ ಮೊತ್ತಕ್ಕೆ ಬಡ್ಡಿ ಅನ್ವಯಿಸುವುದಿಲ್ಲ. | ಅರ್ಜಿ ಸಂಖ್ಯೆ :1833/93, ಶ್ರೀ ಬಿ.ಜಿ. ಭಾಸ್ಕರ – ವಿರುದ್ಧ – ರಾಜ್ಯ ಸರ್ಕಾರ ಈಪ್ರಕರಣದಲ್ಲಿ ಪರಿವರ್ತಿತ ಪಿಂಚಣಿಯು ಸಂಪೂರ್ಣ ಪಿಂಚಣಿಯನ್ನು ಪಡೆಯುವದು ಕೊನೆಗೊಂಡ ದಿನಾಂಕದಿಂದಲೇ ಲಭ್ಯವಾಗುವುದರಿಂದ ಆ ದಿನಾಂಕದಿಂದ ಮಾತ್ರ ತಡವಾಗಿ ಪಾವತಿಸುವ ಪರಿವರ್ತಿತ ಪಿಂಚಣಿಗೆ ಬಡ್ಡಿಯನ್ನು ನೀಡಬೇಕಾಗುತ್ತದೆಯೆಂದು ಕರ್ನಾಟಕ ನ್ಯಾಯ ಮಂಡಳಿಯು ಆದೇಶಿಸಿರುತ್ತದೆ. ಪರಿವರ್ತಿತ ಪಿಂಚಣಿ ಪಡೆಯುವ ದಿನಾಂಕದವರೆಗೆ ಸಂಪೂರ್ಣ ನಿವೃತ್ತಿ ವೇತನವನ್ನು ಪಡೆಯುತ್ತಿರುವುದರಿಂದ ಪಿಂಚಣಿದಾರನಿಗೆ ಯಾವುದೇ ಆರ್ಥಿಕ ನಷ್ಟವು ಉಂಟಾಗುವುದಿಲ್ಲ.+ಪೂರ್ಣ ಪಿಂಚಣಿಯು ಕಡಿತಗೊಂಡ ದಿನಾಂಕ ಮತ್ತು ಪರಿವರ್ತಿತ ಪಿಂಚಣಿಯನ್ನು ಪಾವತಿಸಿದ ದಿನಾಂಕದ ನಡುವೆ ಯಾವುದೇ ಸಮಯದ ಅಂತರವಿಲ್ಲದಿರುವುದರಿಂದ ಪಿಂಚಣಿದಾರರಿಗೆ ತಡವಾಗಿ ಪಾವತಿಸಿದ ಪರಿವರ್ತಿತ ಪಿಂಚಣಿಯ ಮೇಲೆ ಯಾವುದೇ ಆರ್ಥಿಕ ನಷ್ಟವನ್ನು ಸರಿದೂಗಿಸುವ ಸಲುವಾಗಿ ಬಡ್ಡಿಯನ್ನು ನೀಡುವ ಪ್ರಮೇಯ ಉದ್ಭವಿಸುವುದಿಲ್ಲ. (ಉಲ್ಲೇಖಿತ ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ (ಸ್ಪೆಷಲ್) 199/ಪಿಇಎನ್/93,ದಿ: 13–09–1994) |
| 5) ಬಡ್ಡಿ ಅನ್ವಯಿಸುವ ಕಾಲಾವಧಿಯನ್ನು ಖಚಿತವಾಗಿ ನಿರ್ಧರಿಸುವುದು | i) ಪ್ರಾರಂಭ ಸರ್ಕಾರಿ ಆದೇಶ ಸಂಖ್ಯೆ ಆಇ(ವಿ) 199/ಪಿಇಎನ್ 93,ದಿ: 13–09–1994 ರ ಕಂಡಿಕೆ 2 ರ (ಎ) (ಬಿ) ಮತ್ತು (ಸಿ) ಯ 3 ಅವಕಾಶಗಳನ್ನು ಕಾಲವಧಿಯ ಪ್ರಾರಂಭದ ಕುರಿತು ನಿಗದಿಪಡಿಸಲಾಗಿದೆ. ಕಂಡಿಕೆ 2 (ಎ) ಮತ್ತು 2 (ಬಿ) ಯ ಕಾಲಾವಧಿಗಳ ಪ್ರಾರಂಭವು ಒಂದೇ ತೆರನಾಗಿದ್ದು, ನೌಕರನು ನಿವೃತ್ತಿ ಹೊಂದಿದ 4 ನೇ ತಿಂಗಳ ಮೊದಲಿಂದ ಪ್ರಾರಂಭವಾಗುತ್ತದೆ. ಕಂಡಿಕೆ 2 (ಸಿ) ಯಂತೆ ನೌಕರನು ವಿಚಾರಣೆಯಲ್ಲಿ ಭಾಗಶ: ದೊಷ ಮುಕ್ತನಾದ ಸಂದರ್ಭದಲ್ಲಿ ಆ ಕುರಿತು ಹೊರಡಿಸಿದ ಆದೇಶದ ದಿನಾಂಕದ ನಂತರದ 4 ನೇ ತಿಂಗಳ ಮೊದಲಿಂದ ಪ್ರಾರಂಭವಾಗುತ್ತದೆ.<br>ii) ಅಂತ್ಯ:–<br>ಈ ಮೇಲಿನ ಮೂರು ಅವಕಾಶಗಳಲ್ಲಿ ಬಡ್ಡಿಯನ್ನು ನಿವೃತ್ತಿ ಸೌಲಭ್ಯವನ್ನು "ಇತ್ಯರ್ಥಗೊಳಿಸಿದ" ದಿನಾಂಕದ ಹಿಂದಿನ ತಿಂಗಳ ಕೊನೆಯ ದಿನಾಂಕದ ತನಕ ಬಡ್ಡಿಯನ್ನು ಲೆಕ್ಕ ಹಾಕಬೇಕೆಂದಿದೆ. "ಇತ್ಯರ್ಥಗೊಳಿಸಿದ" ದಿನಾಂಕವನ್ನು ನಿವೃತ್ತಿ ಸೌಲಭ್ಯದ ಪಾವತಿಯನ್ನು ಪ್ರಾಧೀಕರಿಸುವ ಮಹಾಲೇಖಾಪಾಲರ ಅಥವಾ ಕಚೇರಿ ಮುಖ್ಯಸ್ಥರ ಪ್ರಾಧೀಕರಣ ಪತ್ರದ ದಿನಾಂಕವೆಂದು ಪರಿಗಣಿಸಿ ಅದರ ಹಿಂದಿನ ತಿಂಗಳ ಕೊನೆಯ ದಿನಾಂಕದವರೆಗೆ ಲೆಕ್ಕ ಹಾಕಬೇಕಾಗುತ್ತದೆ. ಈ ಕುರಿತು ಮಹಾಲೇಖಾಪಾಲರ ಕಛೇರಿಯಿಂದ ಹೊರಡಿಸಲಾಗುವ ಅರ್ಹತೆಯ (ಎಂಟೈಟಲ್‌ಮೆಂಟ್) ಸೂಚನಾ ಪತ್ರವನ್ನು ಪರಿಗಣಿಸದೆ ಆನಂತರ ಹೊರಡಿಸಲಾಗುವ ನಿವೃತ್ತಿ |

| ವಿಷಯ | ಗಮನಿಸಬೇಕಾದ ಪ್ರಮುಖ ಅಂಶಗಳು |
|---|---|
| | ಸೌಲಭ್ಯದ ಪಾವತಿಗಾಗಿ ಖಜಾನೆಗೆ ನೀಡುವ ಪ್ರಾಧೀಕರಣ ಪತ್ರದ ದಿನಾಂಕವನ್ನು "ಇತ್ಯರ್ಥಗೊಳಿಸಿದ" ದಿನಾಂಕವೆಂದು ಪರಿಗಣಿಸಬೇಕಾಗುತ್ತದೆ. |
| 6) ನೌಕರನು ಮರಣ ಹೊಂದಿದ ಪ್ರಕರಣದಲ್ಲಿ ಮತ್ತು ಪಾವತಿಯನ್ನು ಪಡೆಯುವ ಕುಟುಂಬದ ಸದಸ್ಯರ ಹಕ್ಕಿನ ಬಗ್ಗೆ ವಿವಾದವಿದ್ದ ಪ್ರಕರಣದಲ್ಲಿ ಕಾಲಾವಧಿಯನ್ನು ನಿಯಮಾನುಸಾರ ನಿರ್ಧರಿಸುವುದು. | ಸರ್ಕಾರಿ ಆದೇಶ ದಿನಾಂಕ: 13-09-1994 ರ ಕಂಡಿಕೆ (3), (4) ಮತ್ತು (5) ರಲ್ಲಿ ನೌಕರನು ನಿಧನಗೊಂಡ ವಿವಿಧ ಸಂದರ್ಭಗಳನ್ವಯ ಬಡ್ಡಿ ಲೆಕ್ಕ ಮಾಡುವ ವಿಧಾನವನ್ನು ಮತ್ತು ಪರಿಗಣಿಸಬೇಕಾದ ಕಾಲವಧಿಯನ್ನು ಸ್ಪಷ್ಟಪಡಿಸಿರುತ್ತದೆ. ಕಛೇರಿಯ ಮುಖ್ಯಸ್ಥರಿಗೆ ಪ್ರತ್ಯಾಯೋಜಿಸಿರುವ ಅಧಿಕಾರವನ್ನು ಹೊರತುಪಡಿಸಿ ಅಗತ್ಯವೆಂದು ಕಂಡು ಬಂದರೆ ಸಾಕಷ್ಟು ಮೊದಲೇ ಕಾನೂನು ಇಲಾಖೆಯ ಅಭಿಪ್ರಾಯವನ್ನು ಪಡೆದು ಆರ್ಥಿಕ ಇಲಾಖೆಯನ್ನು ಸಂಪರ್ಕಿಸುವುದು. |
| 7) ವಿಳಂಬಕ್ಕೆ ಕಾರಣರಾದವರ ದಾಯಿತ್ವವನ್ನು ನಿರ್ಧರಿಸಲು ಶಿಸ್ತಿನ ಕ್ರಮ ಜರುಗಿಸುವುದು. | ಆಡಳಿತ ಇಲಾಖೆಯು ಬಡ್ಡಿ ಪಾವತಿಯಿಂದಾಗುವ ನಷ್ಟಕ್ಕೆ ಕಾರಣರಾದವರನ್ನು ಮೇಲಿನ ದಿನಾಂಕ: 13-09-1994 ರ ಸರ್ಕಾರಿ ಆದೇಶದ ಕಂಡಿಕೆ (6) ಮತ್ತು (7) ರನ್ವಯ ಮೊದಲು ಗುರುತಿಸಬೇಕಾಗುತ್ತದೆ. ಬಡ್ಡಿ ಪಾವತಿಯಿಂದಾಗುವ ನಷ್ಟವನ್ನು ದಂಡದ ರೂಪದಲ್ಲಿ ವಸೂಲು ಮಾಡಲು ಇಲಾಖಾ ವಿಚಾರಣೆಯನ್ನೇ ಪ್ರಾರಂಭಿಸಬೇಕಾಗುವ ಅವಶ್ಯಕತೆ ಇದ್ದಾಗ ಸೂಕ್ತ ವಿಚಾರಣೆಯನ್ನು ಪ್ರಾರಂಭಿಸಿರುವ ಕುರಿತು ಬಡ್ಡಿ ಪ್ರಸ್ತಾವನೆಯ ಕಡತದಲ್ಲಿ ನಮೂದಿಸಬೇಕಾಗುತ್ತದೆ. |
| 8) ನ್ಯಾಯಾಲಯದ ವೆಚ್ಚ ಮತ್ತು ದಂಡನೆಯನ್ನು ಬಡ್ಡಿ ಲೆಕ್ಕಾಚಾರಕ್ಕೆ ಸೇರಿಸಲು ಅವಕಾಶವಿಲ್ಲ. | ನ್ಯಾಯಾಲಯ ವೆಚ್ಚ ಮತ್ತು ನ್ಯಾಯಾಲಯ ನಿಂದನೆ ಪ್ರಕರಣಗಳಲ್ಲಿ ನ್ಯಾಯಾಲಯವು ವಿಧಿಸುವ ದಂಡದ ಮೊತ್ತಗಳನ್ನು ಬಡ್ಡಿ ಪಾವತಿಯ ಲೆಕ್ಕ ಶೀರ್ಷಿಕೆ 2049-60-701-3-01 ರ ಅಡಿ ಭರಿಸಲು ಬರುವುದಿಲ್ಲ. ಈ ಪಾವತಿಗಳನ್ನು ಸಂಬಂಧಪಟ್ಟ ಇಲಾಖೆಯ ವೆಚ್ಚ ಶೀರ್ಷಿಕೆಯ "ಸಾದಿಲ್ವಾರು" ಉಪ ಶೀರ್ಷಿಕೆಯಡಿಯಲ್ಲಿ ಭರಿಸಬೇಕಾಗುವುದರಿಂದ ಈ ಕುರಿತು ಆರ್ಥಿಕ ಇಲಾಖೆಯ ಸಂಬಂಧಪಟ್ಟ ವೆಚ್ಚ ಶಾಖೆಯ ಸಹಮತಿ ಪಡೆದು ಪ್ರತ್ಯೇಕವಾದ ಮಂಜೂರಾತಿ ಆದೇಶವನ್ನು ಹೊರಡಿಸಬೇಕಾಗುತ್ತದೆ. |

3. ಮೇಲಿನ ಎಲ್ಲಾ ಮುಂಜಾಗರುಕತೆಗಳನ್ನು ವಹಿಸಿ ಪ್ರಸ್ತಾವನೆಯನ್ನು ಸರ್ಕಾರದ ಸುತ್ತೋಲೆ ಸಂಖ್ಯೆ ಆಇ (ವ) 71 ನಿವೇತ 97, ದಿನಾಂಕ: 20-11-1997 ರನ್ವಯ ಆಡಳಿತ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರ ಅಥವಾ ಸದರಿ ಹುದ್ದೆಯು ಇಲ್ಲದಿರುವಲ್ಲಿ ಇಲಾಖಾ ಕಾರ್ಯದರ್ಶಿಯವರ ಸ್ಪಷ್ಟ ಅಭಿಪ್ರಾಯ ಹಾಗೂ ಅನುಮೋದನೆಯೊಂದಿಗೆ ವಿಶೇಷಾಧಿಕಾರಿಗಳು (ವಿಶ್ರಾಂತಿ ವೇತನ) ಆರ್ಥಿಕ ಇಲಾಖೆ ಇವರ ಸಹಮತಿಗಾಗಿ ಕಳುಹಿಸಬೇಕಾಗುತ್ತದೆ.

4. ಪ್ರಸ್ತಾವನೆಗಳ ಕುರಿತು ಸಹಮತಿಯನ್ನು ಶೀಘ್ರವಾಗಿ ನೀಡಲು ಅನುಕೂಲವಾಗುವಂತೆ ಆಡಳಿತ ಇಲಾಖೆಗಳು ತಮ್ಮ ಇಲಾಖಾ ಹಂತದಲ್ಲೇ ಸಾಕಷ್ಟು ಮುಂಜಾಗ್ರತೆ ವಹಿಸಬೇಕಾಗುತ್ತದೆ.

5. ಈ ಮೇಲೆ ವಿವರಿಸಿದ ಯಾವುದೇ ಲೋಪಗಳು ಉದ್ಭವಿದಂತೆ ಎಲ್ಲಾ ಇಲಾಖಾ ಕಾರ್ಯದರ್ಶಿಗಳು ಸಾಕಷ್ಟು ಮುಂಜಾಗ್ರತೆ ವಹಿಸುವಂತೆಯೂ ಮತ್ತು ಯಾವುದೇ ಹಂತದಲ್ಲಿ ಅಧಿಕಾರಿಗಳ ಅಲಕ್ಷತೆಯಿಂದ ಲೋಪಗಳು ಕಂಡುಬಂದಲ್ಲಿ ಅವರ ವಿರುದ್ಧ ಸೂಕ್ತ ಕ್ರಮ ಜರುಗಿಸುವಂತೆಯೂ ಈ ಮೂಲಕ ಕೋರಲಾಗಿದೆ.

ಸಹಿ/-

(ಡಿ.ಎನ್. ನರಸಿಂಹರಾಜು)

ಸರ್ಕಾರದ ಕಾರ್ಯದರ್ಶಿಗಳು (ವೆಚ್ಚ)

ಆರ್ಥಿಕ ಇಲಾಖೆ.

ಇವರಿಗೆ:

1) ಸಂಕಲನಕಾರರು, ಕರ್ನಾಟಕ ಗೆಜೆಟ್ ಮುಂದಿನವಾರದ ಪ್ರಕಟಣೆಯಲ್ಲಿ ಪ್ರಕಟಿಸುವುದಕ್ಕಾಗಿ

2) ಆರ್ಥಿಕ ಇಲಾಖೆಯ ಗಣಕ ಕೇಂದ್ರ "ವೆಬ್ ಸೈಟ್" "WWW.Kar.nic.in/finance"ನಲ್ಲಿ ಅಳವಡಿಸುವುದಕ್ಕಾಗಿ

3) ಮಹಾಲೇಖಾಪಾಲರು (ಲೆಕ್ಕ/ಆಡಿಟ್) ಕರ್ನಾಟಕ ಬೆಂಗಳೂರು.

4) ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು: ಸರ್ಕಾರದ ಕಾರ್ಯದರ್ಶಿಗಳು.

5) ಎಲ್ಲಾ ಇಲಾಖಾ ವಿಶೇಷ ಅಪರ: ಜಂಟಿ ಕಾರ್ಯದರ್ಶಿಗಳು

6) ಖಜಾನೆ ನಿರ್ದೇಶಕರು, ಬೆಂಗಳೂರು.

7) ರಾಜ್ಯದ ಎಲ್ಲಾ ಇಲಾಖಾ ಮುಖ್ಯಸ್ಥರು,

8) ನಿಯಂತ್ರಕರು ರಾಜ್ಯ ಲೆಕ್ಕ ಪತ್ರ ಇಲಾಖೆ ಬೆಂಗಳೂರು

9) ರಾಜ್ಯ ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು

10) ಎಲ್ಲಾ ಇಲಾಖಾ ಉಪ : ಅಧೀನ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರದ ಸಚಿವಾಲಯ

11) ಆರ್ಥಿಕ ಇಲಾಖೆಯ, ಎಲ್ಲಾ ಶಾಖಾಧಿಕಾರಿಗಳು

12) ರಾಜ್ಯದ ಎಲ್ಲಾ ಖಜಾನೆ ಅಧಿಕಾರಿಗಳು (ಖಜಾನೆ ನಿರ್ದೇಶಕರ ಮೂಲಕ) ಶಾಖೆಯ ರಕ್ಷಾ ಕಡತ ಮತ್ತು ಹೆಚ್ಚಿನ ಪ್ರತಿಗಳು.